ಶ್ರೀ ಜಿ. ಪುಟ್ಟಸ್ವಾಮಿಗೌಡ.—ಏತ ನೀರಾವರಿ ಯೋಜನೆಗಳು ಆಗಬೇಕು. ಏತ ನೀರಾವರಿ ಯೋಜನೆಯಿಂದ ೩ ಲಕ್ಷದ ೧೩ ಸಾವಿರ ಎಕರೆಗಳಿಗೆ ನೀರಾವರಿಯಾಗಬೇಕೆಂದು ಯೋಜನೆ ಇದ್ದರೂ ಕೂಡ ಅಲ್ಲಿರತಕ್ಕ ಪಂಪುಗಳು ಮತ್ತು ಯಂತ್ರಗಳಿಂದ ಆಗುತ್ತಿಲ್ಲ ಅವು ಬಹಳ ಹಳೆಯವು. ನಾವು ಯೋಜಿಸಿರುವ ಪ್ರದೇಶಕ್ಕೆ ಆ ಯಂತ್ರಗಳಿಂದ ನೀರನ್ನು ಕೊಡುವುದಕ್ಕೆ ಆಗುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವುಗಳಿಗೆ ಕಾಯಕಲ್ಪ ಮಾಡಬೇಕೆನ್ನುವ ನಿರ್ಧಾರವನ್ನು ನಾವು ತೆಗೆದುಕೊಂಡಿದ್ದೇವೆ. ಹಳೆಯ ಪಂಪುಗಳನ್ನು ಬದಲಾಯಿಸಿ ಹೊಸ ಪಂಪುಗಳನ್ನು ಹಾಕಬೇಕು. ನಾವೇನು ಇಷ್ಟು ಎಕರೆಗೆ ನೀರನ್ನು ಒದಗಿಸಬೇಕೆಂದು ನಿಗದಿ ಮಾಡಿದ್ದೇವೆ, ಆ ಪ್ರದೇಶಕ್ಕೆ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏತ ನೀರಾವರಿ ನಿಗಮದ ಬಗ್ಗೆ ಹೇಳಿದ್ದಾರೆ, ಅದಕ್ಕೆ ಹೊಸದಾಗಿ ಚಾಲನೆಯನ್ನು ಕೊಡುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಏತ ನೀರಾವರಿ ನಿಗಮಗಳನ್ನು ಏನು ಮಾಡಿದ್ದಾರೆ ಅಲ್ಲಿ ಬಹಳ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವ ಆಪಾದನೆ ಬಂದಿರುವುದನ್ನು ನಾವು ಪತ್ರಿಕೆಗಳಲ್ಲಿ ಓದಿ ನೋಡಿದ್ದೇವೆ. ಅದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಏತ ನೀರಾವರಿ ನಿಗಮಗಳಲ್ಲಿ ಯಾವ್ಯಾವ ಭ್ರಷ್ಟಾಚಾರ ನಡೆದಿದೆ? ಎಷ್ಟು ಪ್ರಮಾಣದ ಭ್ರಷ್ಟಾಚಾರ ನಡೆದಿದೆ? ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ಏನಾದರೂ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ರೂಪಿಸಿದ್ದೀರಾ. ಸರಿಯಾದ ರೀತಿಯಲ್ಲಿ ಏತ ನೀರಾವರಿ ನಿಗಮ ಕಾರ್ಯಕ್ರಮ ನಡೆಸುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ? ಹಾಗಿದ್ದರೆ ಅದರ ರೂಪರೇಷೆಗಳನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಲಿಫ್ಟ್ ಇರಿಗೇಶನ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ನಾನು ಮೇಲಿಂದಮೇಲೆ ಹೇಳಿದ್ದೇನೆ. ಆದ್ದರಿಂದ ಲಿಫ್ಟ್ ಇರಿಗೇಶನ್ ಬಗ್ಗೆ ಭ್ರಷ್ಟಾಚಾರ ಉದ್ಭವ ವಾಗುವುದಿಲ್ಲ. ಹಾಗೇನಾದರೂ ಮಾನ್ಯ ಸದಸ್ಯರು...

ಶ್ರೀ ಕೆ. ಲಕ್ಕಪ್ಪ.—ಭ್ರಷ್ಟಾಚಾರ ನಡೆಸಿದ್ದಾರೆ, ಕೆಲಸ ಮಾಡುತ್ತಿಲ್ಲ ಎಂಬ ಆಪಾದನೆಗಳು ಪತ್ರಿಕೆಗಳಲ್ಲೇ ಬಂದಿರತಕ್ಕದ್ದು. ಇದು ಅನೇಕ ಕಡೆ ನಡೆದಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ ಎಂದು ನಾನು ಒಪ್ಪುತ್ತೇನೆ. ಕಾರಣ ಕೂಡ ಹೇಳಿದ್ದೇನೆ. ಆದರೆ ಭ್ರಷ್ಟಾಚಾರ ಆಪಾದನೆ ಖಂಡಿತವಾಗಿ ಇದ್ದರೆ ತಮ್ಮ ಮೂಲಕ ಮಾನ್ಯ ಸದಸ್ಯರು ತಮ್ಮ ಮೂಲಕ ಸ್ಪಷ್ಟಪಡಿಸಿದರೆ ನಾನು ತನಿಖೆ ಮಾಡಿಸುವುದಕ್ಕೆ ಬದ್ಧನಾಗಿದ್ದೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ತುಮಕೂರು—ಬೆಂಗಳೂರು ನಡುವೆ ತಡೆ ರಹಿತ ಬಸ್ಸುಗಳ ಬಗ್ಗೆ

೩೪೩. ಶ್ರೀ ಎಸ್. ಶಫಿ ಅಹಮದ್ (ತುಮಕೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಯಾಣಿಕರ ಬೇಡಿಕೆಯನ್ನು ಈಡೇರಿಸಲು ತುಮಕೂರಿನಿಂದ ಬೆಂಗಳೂರಿಗೆ ಸಂಚರಿಸುವ ತಡೆ ರಹಿತ ಬಸ್ಸುಗಳನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ದಿಕ್ಕಿನಿಂದ ೨೬ ತಡೆರಹಿತ ಬಸ್ಸುಗಳನ್ನು ಓಡಿಸಲಾಗುವದಲ್ಲದೇ ತುಮಕೂರಿನಿಂದ ಬೆಂಗಳೂರಿಗೆ ೬ ಹೆಚ್ಚುವರಿ ತಡೆರಹಿತ ಟ್ರಿಪ್ಪುಗಳನ್ನು ದಿನಾಂಕ ೧೦-೬-೧೯೯೦ ರಿಂದ ಪ್ರಾರಂಭಿಸಲಾಗಿದೆ.

ದಾವಣಗೆರೆಯಲ್ಲಿ ಬಸ್‌ಸ್ಟ್ಯಾಂಡಿನಲ್ಲಿಯ ಅವ್ಯವಸ್ಥೆಯ ಬಗ್ಗೆ

೪೭೦. ಶ್ರೀ ವೈ ಎಂ. ವೀರಣ್ಣ (ದಾವಣಗೆರೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆಯಲ್ಲಿ ಪ್ರಾರಂಭಿಸಲಾದ ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ನಿಲ್ದಾಣವು ಹಲವಾರು ಅವ್ಯವಸ್ಥೆಯ ಆಗರವಾಗಿದೆಯೆಂಬ ದೂರು ಸರ್ಕಾರಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಅವ್ಯವಸ್ಥೆಯನ್ನು ನಿವಾರಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಬಂದಿದೆ.

ಆ) ದಾವಣಗೆರೆ ನೂತನ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರು ಮಹಿಳೆಯರ ಮತ್ತು ಪುರುಷರ ಪ್ರತ್ಯೇಕ ಶೌಚಾಲಯಗಳು, ಮಹಿಳೆಯರ ನಿರೀಕ್ಷಣಾ ಕೊಠಡಿ, ಆಸನಗಳ ಮುಂಗಡ ಕಾದಿರಿಸುವಿಕೆ, ತಂಪು ಪಾನೀಯಗಳ ಅಂಗಡಿ, ಪಾನ್ ಬೀಡಾ ಅಂಗಡಿ ಮತ್ತು ಸಾಮಾನ್ಯ ವಸ್ತುಗಳ ಅಂಗಡಿಯ ವ್ಯವಸ್ಥೆ ಇದೆ. ಸ್ಕೂಟರ್-ಸೈಕಲ್ ನಿಲ್ದಾಣ, ಉಪಹಾರ ಗೃಹ, ವೃತ್ತ ಪತ್ರಿಕೆ ಪುಸ್ತಕಗಳ ಅಂಗಡಿ ಮತ್ತು ಔಷಧಗಳ ಅಂಗಡಿಯ ಸೌಕರ್ಯವನ್ನು ಬೇಗನೆ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕವಾಗಿ ಉತ್ತರಿಸುವ ೩೪ ಪ್ರಶ್ನೆಗಳ ಪೈಕಿ ೬ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ ೨೮ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಫಜಲಪುರ ತಾಲ್ಲೂಕಿನಲ್ಲಿ ಭೀಮಾ ಏತ ನೀರಾವರಿ ಯೋಜನೆಯ ಬಗ್ಗೆ

೭೧. ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಫಜಲಪುರ ತಾಲ್ಲೂಕಿನ ಭೀಮಾ ಏತ ನೀರಾವರಿ ಯೋಜನೆಯು ಸೇರ್ಪಡೆಯಾಗಿದೆಯೇ?

ಆ) ಹಾಗಿದ್ದಲ್ಲಿ, ಈ ಯೋಜನೆಯು ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು?

ಇ) ಈ ಯೋಜನೆಯಿಂದ ಎಷ್ಟು ಎಕರೆ ಭೂಮಿಯು ನೀರಾವರಿಯಾಗುವುದು?

ಈ) ಈ ಯೋಜನೆಯನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಸೇರಿಸಿ ಕಾರ್ಯಗತಗೊಳಿಸಲಾಗುವುದೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಈ ಯೋಜನೆಗೆ ಕೇಂದ್ರ ಜಲ ಆಯೋಗದಿಂದ ಇನ್ನೂ ಅನುಮತಿ ದೊರಕಬೇಕಾಗಿದೆ.

ಇ) ಸುಮಾರು ೬೦,೦೦೦ ಎಕರೆ ಭೂಮಿಯು ನೀರಾವರಿಯಾಗುವುದು.

ಈ) ಉದ್ದೇಶವಿರುವುದಿಲ್ಲ.

ರಾಜ್ಯದ ಉಚ್ಚ ನ್ಯಾಯಾಲಯದ ಬಗ್ಗೆ

ಶ್ರೀ, ಶ್ರೀ ಎಂ. ನಾರಾಯಣಸ್ವಾಮಿ (ಚೇತಮಂಗಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನವೀಕರಣ ಹಾಗೂ ದುರಸ್ತಿಗಾಗಿ ನಿಗದಿ ಮಾಡಿರುವ ಅಂದಾಜು ಪಣವೆಷ್ಟು ,

ಆ) ಈ ಪೈಕಿ ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ.

ಇ) ಸದರಿ ಕಟ್ಟಡದ ನವೀಕರಣ ಹಾಗೂ ದುರಸ್ತಿ ಕಾರ್ಯವು ಬಹಳ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸದರಿ ಕಾಮಗಾರಿಯನ್ನು ತುರ್ತಾಗಿ ಪೂರೈಸಲು ಕೈಗೊಂಡಿರುವ ಕ್ರಮಗಳೇನು ?